ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ ನ್ಯಾಯಾಲಯ , ಹೊನ್ನಾಳಿ.

ಸಿ.ಸಿ. 465/ 2016

ಹೆಸರು	ಕೆ ಎಸ್ ಜಗದೀಶ	ಸಿಡಬ್ಲೂ ಃ3
ತಂದೆಯ ಹೆಸರು	ಕೆ ಶಿವರುದ್ರಪ್ಪ	ಪಿಡಬ್ಲೂ ಃ2
ವಯಸ್ಸು	42	ದಿಃ14-06-2018
ವೃತ್ತಿ	ವ್ಯವಸಾಯ	
ವಾಸಸ್ಥಳ	ಚಿಲೂರು ಗ್ರಾಮ	
ಮುಖ್ಯವಿಚಾರಣೆ	ಎ ಪಿ ಪಿ ರವರಿಂದ	

ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಈಗ ತೋರಿಸಿದ ಸಹಿ ನನ್ನದು ಇರುತ್ತದೆ. ದಿ.14.12.2015 ರಂದು ಚಿಲೂರು ವೀರಭದ್ರಪ್ಪನವರ ಗೋಡಾನ್ ನಲ್ಲಿ ಹಾಕಿರುತ್ತೇನೆ. ನಾನು ಅಡಿಕೆ ಹಾಕಲು ಗೋಡಾನ್ ಗೆ ಹೋದಾಗ ಪೊಲೀಸರು ಅಡಿಕೆ ಕಳ್ಳತನ ಆಗಿದೆ ಎಂದು ಗೋಡಾನ್ ನಲ್ಲಿ ಮಹಜರ್ ನ್ನು ಬರೆಯುತ್ತಿದ್ದರು. ಸ್ಥಳದಲ್ಲಿ ದೋರೆಷ ಬಾಬು ರವರು ತೋರಿಸಿದಂತೆ ಮಹಜರನ್ನು ನನ್ನ ಮತ್ತು ರವಿಕುಮಾರ ಅವರ ಸಮಕ್ಷಮ ಮ.4.30 ರಿಂದ 5.30 ರವರೆಗೆ ಮಹಜರ್ ನ್ನು ತಯಾರಿಸಿರುತ್ತಾರೆ. ಸದರಿ ಗೋಡಾನ್ ನಲ್ಲಿ ಅಡಿಕೆ ಕಳ್ಳತನ ಆಗಿತ್ತು ಎಂದು ಪೊಲೀಸರು ಬಂದಿದ್ದರು. ಸದರಿ ಮಹಜರ್ ನ್ನು ಈಗಾಗಲೇ ನಿಪಿ.2 ಎಂದು ಗುರುತಿಸಲಾಗಿದ್ದು ಸಾಕ್ಷಿ ಸಹಿಯನ್ನು ನಿಪಿ.2(ಬಿ) ಎಂದು ಗುರುತಿಸಲಾಯಿತು.

ಪಾಟೀ ಸವಾಲು ಅರೋಪಿ ಪರ ವಕೀಲರಿಂದಃ-

ನಾನು ಅಡಿಕೆ ಹಾಕಲು ಹೋಗಿದ್ದಾಗ ಪೋಲಿಸರು ಅಲ್ಲಿ ಬಂದಿದ್ದರು. ಮಹಜರ್ ನ್ನು ಪೊಲೀಸರು ಬರೆದಿರುತ್ತಾರೆ. ಪೊಲೀಸರು ಮತ್ತು ನಾವು ಸ್ಥಳದಲ್ಲಿ ಇದ್ದೇವು. ಜಿಕೆಎಸ್ ಎಂದು ಗೋಡಾನ್ ಮೇಲೆ ಹೆಸರು ಇತ್ತು. ಗೋಡಾನ್ ಚೆಕ್ಕುಬಂಧಿಯನ್ನು ನನಗೆ ಹೇಳಲಾಗುವುದಿಲ್ಲ. ಪೊಲೀಸರು ಹೇಳಿದಂತೆ ನಾನು ಸಹಿ ಹಾಕಿರುತ್ತೇನೆ. ಮಹಜರ್ ನಲ್ಲಿರುವ ಅಂಶಗಳನ್ನು ನನಗೆ ಓದಿ ಹೇಳಿರುವುದಿಲ್ಲ. ಪೊಲೀಸರು ಸದರಿ ದಿನ ಸ್ಥಳಕ್ಕೆ ಬಂದಿರಲ್ಲಿಲ್ಲ , ನನ್ನ ಸಮಕ್ಷಮ ಮಹಜರ್ ಮಾಡಿರುವುದಿಲ್ಲ , ನಿಪಿ.2 ದಾಖಲೆಗೆ ಠಾಣೆಯಲ್ಲಿ ಸಹಿ ಹಾಕಿ ಪಿರ್ಯಾದುದಾರನ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಪ್ತುಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ನನ್ನ ಸಮಕ್ಷಮ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ಹೊನ್ನಾಳಿ.